ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 10-10-2017

# ತ್ರಿವಿಧ ದಾಸೋಹದ ಮಹಾಬೆಳಕು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳು

# ಶ್ರೀಗಳ 102ನೆಯ ಜಯಂತಿ ಮಹೋತ್ಸವದಲ್ಲಿ – ಡಾ. ಕುಮಾರ್ ಬೆಳಲೆ

ಕೊಳ್ಳೇಗಾಲ : 10-10-2017 : ಲೋಕಸೇವೆ ಮಾಡಲೆಂದೇ ಉದಯಿಸಿದ ಸೇವಾ ಸೂರ್ಯನಂತೆ ಜಗದ ಬೆಳಕಾಗಿ ಸೇವೆ ಮಾಡಿದ ಕಾಯಕಯೋಗಿ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಎಂದು ಮಂಡ್ಯದಲ್ಲಿನ ಮಹಿಳಾ ಸರ್ಕಾರಿ ಪದವಿ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಕುಮಾರ್ ಬೆಳಲೆ ಅಭಿಪ್ರಾಯಿಸಿದರು.

ಇಲ್ಲಿಯ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸಮುಚ್ಚಯದ ಸಂಸ್ಥೆಗಳು ಆಯೋಜಿಸಿದ್ದ ಶ್ರೀಗಳವರ 102ನೆಯ ಜಯಂತಿ ಮಹೋತ್ಸವದಲ್ಲಿ ಭಾಗವಹಿಸಿ ಶ್ರೀಗಳವರ ಕುರಿತು ನುಡಿನಮನ ನೀಡಿದರು.

ಸುತ್ತೂರು ವೀರಸಿಂಹಾಸನ ಮಠಕ್ಕೆ ಬಹುಮುಖ ಆಯಾಮವನ್ನು ನೀಡಿದವರು ರಾಜೇಂದ್ರ ಶ್ರೀಗಳು. ವಿದ್ಯಾರ್ಥಿಗಳ ಬಗ್ಗೆ ಅಪಾರ ಪ್ರೀತಿ ಮತ್ತು ಕಾಳಜಿ ಹೊಂದಿದ್ದ ಅವರು ಮಾಡಿದ ಸೇವೆ ಇಂದು ನೂರಾರು ಸಂಸ್ಥೆಗಳ ಮೂಲಕ ನಮ್ಮ ಮುಂದೆ ಕಂಗೊಳಸುತ್ತಿವೆ. ಬಡತನ, ನಿರುದ್ಯೋಗ, ಅಸಮಾನತೆ, ಅನಾರೋಗ್ಯ, ಅನ್ಯೆರ್ಮಲ್ಯಗಳಗೆ ವಿದ್ಯೆ ಇಲ್ಲದಿರುವುದೇ ಮೂಲ ಎಂಬುದನ್ನು ಅರಿತು 1954ರಲ್ಲಿ ಅವರು ನೆಟ್ಟ ಜೆಎಸ್‌ಎಸ್ ಮಹಾವಿದ್ಯಾಪೀಠ ಎಂಬ ಬೀಜ ಈಗ ಹೆಮ್ಮರವಾಗಿ ಬೆಳೆದು ಲಕ್ಷಾಂತರ ವಿದ್ಯಾರ್ಥಿಗಳ ವಿದ್ಯೆಗೆ ನೆರವಾಗಿದೆ. ಅಕ್ಷರ ಅನ್ನ ದಾಸೋಹದ ಜೊತೆಗೆ ಕಲೆ, ಸಾಹಿತ್ಯ, ಸಂಸ್ಕೃತಿಯೂ ಇದ್ದರೆ ಮಾತ್ರ ಸಮಗ್ರ ವ್ಯಕ್ತಿತ್ವ ರೂಪಿಸಲು ಸಾಧ್ಯ ಎಂದು ಅರಿತು ತ್ರಿವಿಧ ದಾಸೋಹದ ಮಹಾ ಬೆಳಕಾದರು. ರಾಜ್ಯಗಳ ಜೊತೆಗೆ ವಿದೇಶಗಳಲ್ಲಿಯೂ ಶ್ರೀಮಠವು ತನ್ನ ಸೇವಾ ಕ್ಷೇತ್ರವನ್ನು ವಿಸ್ತರಿಸಿರುವುದನ್ನು ನೋಡಿದರೆ ಸಮಾಜ ಕಾಯಕದ ಬಗ್ಗೆ ಶ್ರೀಮಠಕ್ಕೆ ಇರುವ ಕಾಳಜಿಯನ್ನು ತಿಳಯಬಹುದಾಗಿದೆ ಎಂದು ತಿಳಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಡಾ. ಡಿ.ಎಸ್ ಗುರು ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಗಣಕ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರುರವರು ಶ್ರೀಗಳ ಸಮಾಜಮುಖಿ ಕಾರ್ಯಗಳು ಪ್ರತಿಯೊಬ್ಬರಿಗೂ ಮಾದರಿಯಾಗಿದೆ. ಅವರ ಅಗಾಧ ತಪಶಕ್ತಿ, ದೂರದೃಷ್ಟಿಯಿಂದ ಗ್ರಾಮೀಣರ ಬದುಕಿಗೆ ದಾರಿ ದೀಪವಾದರು. ಉಚಿತ ಪ್ರಸಾದ ನಿಲಯಗಳನ್ನು ಸ್ಥಾಪಿಸುವುದರ ಮೂಲಕ ಜನಸಾಮಾನ್ಯರಿಗೂ ವಿದ್ಯಾಭ್ಯಾಸ ಲಭಿಸುವಂತೆ ನೋಡಿಕೊಂಡರು. ಉತ್ತಮ ಸಮಾಜ ನಿರ್ಮಾಣಕ್ಕೆ ಅವಿರತವಾಗಿ ಶ್ರಮಿಸಿದ ಶ್ರೀಗಳವರ ಜಯಂತಿ ಮಹೋತ್ಸವವನ್ನು ಅವರು ಸ್ಥಾಪಿಸಿದ ಎಲ್ಲ ಸಂಸ್ಥೆಗಳಲ್ಲಿಯೂ ಆಯೋಜಿಸುತ್ತಿರುವುದು ಸಂಸ್ಥೆಗಳಗೆ ಬರುವ ಹೊಸ ಹೊಸ ವಿದ್ಯಾರ್ಥಿಗಳಲ್ಲಿ ಹಾಗೂ ನೌಕರರಲ್ಲಿ ಸೇವಾ ಮನೋಭಾವನೆ ಮೂಡಿಸಬಹುದಾಗಿದೆ ಎಂದು ತಿಳಸಿದರು.

ಸಮಾರಂಭದ ಸಮ್ಮುಖ ವಹಿಸಿ ಆಶೀರ್ವಚನ ನೀಡಿದ ಶ್ರೀ ಶ್ರೀಕಂಠಸ್ವಾಮಿಗಳು ರಾಜೇಂದ್ರ ಶ್ರೀಗಳು ಜಗವೆಲ್ಲ ನಗುತಿರಲಿ, ಜಗದಳುವು ನನಗಿರಲಿ ಎಂಬ ಕವಿವಾಣಿಯಂತೆ ಕಷ್ಟದ ಸಂದರ್ಭಗಳಲ್ಲಿಯೂ ವಿದ್ಯಾರ್ಥಿಗಳಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತಾ ವಿಧ್ಯಾ ಸಂಪನ್ನ ಸಮಾಜವನ್ನೇ ನಿರ್ಮಿಸಿದರು ಎಂದು ತಿಳಸಿದರು.

ಸ್ನಾತಕೋತ್ತರ ವಿಭಾಗದ ನಿವೃತ್ತ ನಿರ್ದೇಶಕರಾದ ಪ್ರೊ. ಆರ್ ಎಂ ಚಿಂತಾಮಣಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಗಳ ಮುಖ್ಯಸ್ಥರಾದ ಪ್ರೊ. ಉಮೇಶ, ಶ್ರೀ ಎನ್ ಮಹದೇವಸ್ವಾಮಿ, ಶ್ರೀ ವಿಷಕಂಠಮೂರ್ತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಪ್ರಸ್ತುತ ಚಾಮರಾಜನಗರದಲ್ಲಿ ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ಸುಮತಿ. 2016-17ನೇ ಸಾಲಿನಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಅಂತರ ಕಾಲೇಜು ಸಾಂಸ್ಕೃತಿಕ ಮತ್ತು ಕ್ರೀಡಾ ಕೂಟದ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಕಾರ್ಯಕ್ರಮಕ್ಕೆ ಮುನ್ನ ಸಾರ್ವಜನಿಕ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಬ್ರೆಡ್ ಮತ್ತು ಹಣ್ಣು ವಿತರಿಸಲಾಯಿತು. ಸಂಜೆ ಪರಿಸರ ಸಮೃದ್ಧಿಗಾಗಿ ಕಾಲೇಜಿನಲ್ಲಿ ಸಸಿಗಳನ್ನು ನೆಡಲಾಯಿತು.

ಶ್ರೀ ಬಿ ರುದ್ರೇಶ್ ಸ್ವಾಗತಿಸಿದರು, ಶ್ರೀ ಸಂತೋಷ್ ಕುಮಾರ್ ವಂದಿಸಿದರು. ಶ್ರೀಮತಿ ಸಿ ರೂಪಶ್ರೀ ಕಾರ್ಯಕ್ರಮವನ್ನು ನಿರೂಪಿಸಿದರು.

******

ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 102ನೇ ಜಯಂತಿ ಮಹೋತ್ಸವ
ಚಿತ್ರದಲ್ಲಿ ಶ್ರೀ ಎನ್ ಮಹದೇವಸ್ವಾಮಿ, ಡಾ. ಕುಮಾರ್ ಬೆಳಲೆ, ಪ್ರೊ. ಆರ್ ಎಂ ಚಿಂತಾಮಣಿ,
ಶ್ರೀ ಶ್ರೀಕಂಠಸ್ವಾಮಿಗಳು, ಡಾ. ಡಿ. ಎಸ್ ಗುರು, ಪ್ರಾಚಾರ್ಯ ಪ್ರೊ. ಉಮೇಶ, ಹಾಗೂ
ಶ್ರೀ ವಿಷಕಂಠಮೂರ್ತಿಯವರನ್ನು ಕಾಣಬಹುದು.




ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಕೊಳ್ಳೇಗಾಲ
ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ
ಜಯಂತಿ ಮಹೋತ್ಸವ



